ಶ್ರೀ ಬಿ. ಎಚ್. ಬೋರಣ್ಣಗೌಡ.—ಆ ಪ್ರದೇಶದಲ್ಲಿ ಭಾವಿ ತೆಗಿಸಿಕೊಡಿ, ಅದು ಮಳೆಯ ಅಭಾವಕ್ಕೆ ಸಿಕ್ಕಿದ ಪ್ರದೇಶ ಎಂದು ಅರ್ಜಿಗಳು ಬಂದಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಡಾ॥ ಆರ್. ನಾಗನಗೌಡ.—ಬಂದಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಆ ಕೆಲಸವನ್ನು ಜಾಗ್ರತೆಯಾಗಿ ಮಾಡಿಸಿಕೊಡುತ್ತೀರಾ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—"ಸಿ" ಭಾಗದ ಉತ್ತರದಲ್ಲಿ 33 ಅಂದಾಜುಗಳನ್ನು ಮಂಜೂರು ಮಾಡಿರುವುದಾಗಿ ತಿಳಿಸಿದ್ದೀರಿ. ಅದು ಯಾವಾಗ ಮಂಜೂರಾಯಿತು?

ಡಾ॥ ಆರ್. ನಾಗನಗೌಡ.—ಆ information ಇಲ್ಲಿ ಸಿದ್ಧವಾಗಿಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಮಂಜೂರಾಗಿರುವವುಗಳ ಪೈಕಿ ಯಾವ ಯಾವ ಕೆಲಸ ಪ್ರಾರಂಭಿಸಿದ್ದೀರಿ?

ಡಾ॥ ಆರ್. ನಾಗನಗೌಡ.—ಕೆಲಸ ಯಾವ ಘಟ್ಟದಲ್ಲಿದೆ ಎಂಬುದನ್ನು ತಿಳಿಸಲು information ಸಿದ್ಧವಾಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶವನ್ನು ಬಿಟ್ಟರೆ ಉಳಿದ ನಾಲ್ಕು ತಾಲ್ಲೂಕುಗಳೂ ಮೈದಾನ ಪ್ರದೇಶವೆಂದು ಹೇಳಿದರೆ ಒಪ್ಪುತ್ತೀರಾ?

ಡಾ॥ ಆರ್. ನಾಗನಗೌಡ.—ಹೆಚ್ಚು ಕಡಮೆ ಚಿತ್ರದುರ್ಗಕ್ಕೆ ಸರಿಸಮವಾಗಿದೆಯೆಂದು ಹೇಳಬಹುದು.

ಶ್ರೀ ಬಿ. ಚಿಕ್ಕಣ್ಣ.—ಅಂದಾಜು ಮಂಜೂರಾಗಿದ್ದರೂ ಆ ಬಗ್ಗೆ ಕೆಲಸವೇಕೆ ಇನ್ನೂ ಆಗಿಲ್ಲ?

ಡಾ॥ ಆರ್. ನಾಗನಗೌಡ.—ಜೂನ್ 30ರ ಒಳಗಾಗಿ ಕೇಂದ್ರ ಸರ್ಕಾರದಿಂದ ಒದಗಿರುವ ಹಣವನ್ನು ಖರ್ಚುಮಾಡಬೇಕಾಗಿದೆ. ಜಾಗ್ರತೆಯಾಗಿಯೇ ಕೆಲಸ ವಾಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ತಾಲ್ಲೂಕಿಗೆ ಸೇರಿದ ಅಮ್ಮನಹಳ್ಳಿ ಮುಂತಾದ ಕೆಲವು ಗ್ರಾಮಗಳಿಗೆ ಅಂದಾಜು ಆಗಿ ಮಂಜೂರಾಗಿದೆಯೇ?

ಡಾ॥ ಆರ್. ನಾಗನಗೌಡ.—ಆ ಬಗ್ಗೆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಇದು distress area ಎಂದು ಪರಿಗಣಿಸಲ್ಪಟ್ಟಿದೆಯೆಂಬುದನ್ನು ಗಮನಿಸಿದ್ದೀರಾ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

Supply of Electric Power to Villages.

Q.—62. **Sri B. RACHAIAH** (Yelandur—Scheduled Castes).—

Will the Government be pleased to state :—

(*a*) the names of villages to which electricity has been supplied for the last two years (talukwar information may kindly be furnished) ;

(*b*) the names of villages the estimates of which have been sanctioned and work execution order has not been given (talukwar information may be furnished) ;

(*c*) the names of villages the estimates of which are pending sanction (talukwar information may be furnished) ?

A.—**Dr. R. NAGAN GOWDA** (Minister for Agriculture).—

(*a*) List 'A' appended below.

(*b*) For all sanctioned works, work orders have been assigned.

(*c*) List 'B' appended below.

LIST A.

List of villages electrified during the past two years.

Bangalore District	Mysore District	Mandya District	Hassan District	Kolar District
Channapatna Taluk—	Chamarajanagar Taluk—	Maddur Taluk—	Arkalgud Taluk—	Bangarpet Taluk—
1 Hootiganahosahalli	1 Rangasamudra	1 Uppinekere	1 Arkalgud	1 Kannur
Kanakapura Taluk—	Mysore Taluk—	2 Mallurapatna	2 Konanur	2 Buddamatta
1 Doddamuduvadi	1 Bilikere	3 Maranavanidoddi	Hassan Taluk—	3 Thattareddihalli
Bangalore North Taluk—	2 Yelval Village	4 Konasale	1 Mirle	4 Gollaguruvanahalli
1 Guddahalli	3 Koppegala Village	5 Konahallar	Saklespur Taluk—	5 Papihalli
2 Peenya	Nanjangud Taluk—	6 Koppa	1 Biradahalli	6 Mindahalli (Mahadevapura)
Nelamangala Taluk—	1 Badanval	Pandavapura Taluk—	Channarayapatna Taluk—	7 Savareddyhalli
1 Dasanapura	2 Chinnadevara Hundi	1 Darasaguppe	1 Nuggihalli	8 Banagarae
2 Thyamagondlu	3 Veeregowdanahalli	2 Kopparayanakoppal	Arsikere Taluk—	9 Pujarahalli
3 Sivaganga	4 Devanur	3 Nelamane	1 Banavara	10 Gollahalli
4 Dobespet	5 Eregowdanahalli	4 Belanahalli		11 Budikotta
Dodballapur Taluk—	6 Sinduvally	5 Kennal Village		Mulbagal Taluk—
1 Kodigehalli	Heggadadevanakote Taluk—	Mandya Taluk—		1 Vijalpura
Devanahalli Taluk—	1 Heggadadevanakote	1 Hannayambadi		Srinivasapur Taluk—
1 Bommavara	2 Jayapura	2 Kalanehalli		1 Narasapura
2 Aradeshanahalli	3 Saragur	3 Kothathi Village		2 Arabikothannur
3 Harohalli	Krishnarajanagar Taluk—			Chintamani Taluk—
Anekal Taluk—	1 Saligrama			1 Nayanahalli
1 Muthanallur				Chikballapur Taluk—
2 Kamblipura				1 Ajjawara
3 Chikkagudi				2 Jathwara
4 Doddakanahalli				Goribidnur Taluk—
Hoskote Taluk—				1 Gudibanda
1 Hosahally				2 Pothenhalli
				Sidlaghatta Taluk—
				1 Badagur
				2 Byrasandra
				Bagepalli Taluk—
				1 Bagepalli

List A.—Villages electrified during the past two years—*concld.*

Chikmagalur District	Chitaldrug District	Shimoga District	Tumkur District	Bellary District
Kadur Taluk—	Chitaldrug Taluk—	Sorab Taluk—	Turuvekere Taluk—	1 Amaravati
1 Yellambalase	1 Medahalli	1 Anavatti	1 Turuvekere	2 Paramedevarahalli
Narasimharajapura Taluk—	2 Megalahalli	Honnali Taluk—	Tiptur Taluk—	3 Hegganabudihalli
1 Narasimharajapura	Hosadurga Taluk—	1 Malliganahalli	1 Echanur	
Koppa Taluk—	1 Hosadurga	2 Honnalli	Madhugiri Taluk—	
1 Koppa Town	2 Janakal	3 Geenahalli	1 Kodagenahalli	
Mudigere Taluk—	3 Bagur	Shikaripur Taluk—	Koratagere Taluk—	
1 Mudigere	Holalkere Taluk—	1 Shikaripur	Voddagere	
2 Gullampet	1 Holalkere	Bhadravati Taluk—	Sira Taluk—	
3 Aldur	2 Arehalihatty	1 Siddapura	1 Bukkapatna	
4 Handi	3 Narayanagoudana-halli.	2 Arabilichi		
5 Nandipur	Davangere Taluk—	Chennagiri Taluk—		
6 Tandra Village	1 Bethurkalpanahalli	1 Naganehalli		
7 Vastara ,,	Chellakere Taluk—	Hosanagar Taluk—		
Tarikere Taluk—	1 Chennammana ga-thihalli.	1 Hosanagar		
1 Lakkavalli Village	2 Doddabathigere			
2 Arakere ,,				

LIST B.

Sl. No.	Taluks	Names of the Villages
	BANGALORE DISTRICT.	
1	Bangalore South Taluk ...	Devarachikanahalli, Begur Post, Bannergatta Road.
2	Do ...	Chinnayanapalya Village, Begur Hobli
3	Do ...	Thavarekere Village, Begur Hobli
4	Do ...	Srirampura Village
5	Do ...	Kempapura Village
6	Do ...	Araloor Village, Varthur Hobli
7	Do ...	Doddanagamangala, Begur Hobli
8	Do ...	Basavapura, Begur Hobli
9	Do ...	Thimmasandra and Halenaikanahalli, Sarjapur Road.
10	Do ...	Kaikondahalli and Kasavanahalli 'B'
11	Do ...	Belegere Village
12	Do ...	Singayanapalya, Krishnarajapuram Hobli
13	Do ..	Saraipalya
14	Do ...	Somanahalli Village
15	Hoskote Taluk ...	Byappanahalli
16	Do ...	Dandupalya
17	Do ...	Koralur
18	Do ...	Audur, Biderahalli Hobli
19	Do ...	Tirumenahalli Village
20	Do ...	Narayanahalli
21	Anekal Taluk ...	Neriga Village, Sarjapur Hobli
22	Do ...	Hullahalli
23	Do ...	Indalavadi
24	Do ..	Veerasandra Village
25	Dodballapur Taluk ...	Dodda-Tumkur Village
26	Bangalore North Taluk ...	Ramachandrapura Village
27	Do ..	Nagasettyhalli
28	Do ...	Dasarahalli Village, near Gavipuram Village.
29	Do ...	Kumbarhalli
30	Do ...	Kokol Village
31	Do ...	Ramaswamypalya near Hebbal 'C' Station.
32	Do ...	Subbaiahpalya
33	Vadigenahalli Taluk ..	Dandiganahalli Village
34	Channapatna Taluk ...	Abbur Village
35	Do ...	Kalihosur Village
36	Do ...	Honganur Village
37	Kanakapura Taluk ...	Thotahalli Village
38	Nelamangala Taluk ...	Gollahalli Village
39	Magadi Taluk ...	Kondahalli Village
40	Ramanagaram Taluk ...	Jalamangala Village
41	Do ...	Vaderahalli
	SHIMOGA DISTRICT.	
1	Channagiri Taluk ...	Tavarekere and Nagabuvenahalli
2	Do ...	Kagaturu Village
3	Sorab Taluk ...	Kuppagadde Village
4	Sagar Taluk ..	Neechadi Village
5	Shikaripur Taluk ...	Chickjogihalli Village
6	Do ...	Churchgundi Village
7	Do ...	Issur Village
8	Shimoga Taluk ...	Navule Village

(DR. R. NAGAN GOWDA.)

LIST B—*contd.*

Sl. No.	Taluks	Names of the Villages
	MANDYA DISTRICT.	
1	Mandya Taluk ...	Gowdagere Village
2	Do ...	Hodaghatta Village
3	Do ...	Dudda Village
4	Do ...	Thangalagere Village, Basaralu Hobli
5	Do ...	Kalahalli Village
6	Maddur Taluk ...	Dasahalli Village
7	Do ...	Thippur Village
8	Do ...	Rudrakshipura and Hunsemarada Doddi
9	Srirangapatna Taluk ...	Vadiyandahalli Village
10	Do ...	Mahadevapura Village
11	Do ...	Kadathanalu Village
	KOLAR DISTRICT	
1	Kolar Taluk ...	Thambihalli Village
2	Do ...	Vanarasi Village
3	Do ...	Janapalli Village
4	Chintamani Taluk ...	Gopasandra Village
5	Do ...	Booramakanahalli
6	Do ...	Masturahalli Kaivarhalli
7	Sidlaghatta Taluk ...	Cheemangala Village
8	Mulbagal Taluk ...	Doolapalli Village
9	Do ...	Alangur Village
10	Bangarpet Taluk ...	Parandahalli Village Robertsonpet Hobli
11	Goribidanur Taluk ...	Halahalli Village
	CHITALDRUG DISTRICT	
1	Challakere Taluk ...	Parashuramapura Village
2	Harihar Taluk ...	Amaravathi Village
3	Chitaldrug Taluk ...	Kadalegudda Village, Hireguntanur Hobli
4	Do ...	Lakshmisagar Village
5	Davangere Taluk ...	Hadadi, Kukkavada and Lokikere Villages
6	Hiriyur Taluk ...	Tadapinachinnanahalli
	MYSORE DISTRICT	
1	Chamarajanagar Taluk ...	Alur Village
2	Gundlupet Taluk .	Somanahalli
3	Do ...	Madapatna Village
4	Do ...	Kabbahalli Village
5	T.-Narasipur Taluk ...	Nilasoge Village
6	Do ...	Vokkalagere Village
	HASSAN DISTRICT	
1	Arsikere Taluk ...	Bendekere Village
2	Arkalgud Taluk ...	Huli[illegible] Village
3	Hole-Narsipur Taluk ...	Tejur Village

LIST B.—*concld.*

Sl. No.	Taluks	Names of the Villages
	CHIKMAGALUR DISTRICT.	
1	Kadur Taluk ...	Hagare Village
2	Tarikere Taluk ...	Uderu Shantaveri, Kamanadurga and Siddavabile.
3	Chikmagalur Taluk ...	Indavara Village
	TUMKUR DISTRICT	
1	Koratagere Taluk ...	Akkirampur Village
2	Chikkanayakanahalli ...	Sasal and Gopalanahalli
3	Turuvekere Taluk ...	Tandga Village

ಶ್ರೀ ಬಿ. ರಾಚಯ್ಯ.—ಈ ಪ್ರಶ್ನೆಯ 'ಸಿ' ಭಾಗಕ್ಕೆ ಒದಗಿಸಿರುವ ಪರಿಶಿಷ್ಟದಲ್ಲಿ ನಮೂದಿಸಿರುವ ಚಾಮರಾಜನಗರ ತಾಲ್ಲೂಕು ಆಲೂರು ಗ್ರಾಮಕ್ಕೆ ಸಂಬಂಧಪಟ್ಟ ಅಂದಾಜು ಎಷ್ಟು ವರ್ಷಗಳಿಂದ ಸರ್ಕಾರದ ಪರಿಶೀಲನೆಯಲ್ಲಿದೆ ?

ಡಾ॥ ಆರ್. ನಾಗನಗೌಡ.—ಆ information ಈಗ ನಮ್ಮಲ್ಲಿ ಸಿದ್ಧವಾಗಿಲ್ಲ.

ಶ್ರೀ ಬಿ. ರಾಚಯ್ಯ.— ಆದಕ್ಕೆ ಸಂಬಂಧಪಟ್ಟ ಅಂದಾಜು ತಯಾರಾಗಿದೆಯೇ ?

ಡಾ॥ ಆರ್. ನಾಗನಗೌಡ.— ಆ ಆಲೂರು ಗ್ರಾಮಕ್ಕೆ ಸಂಬಂಧಪಟ್ಟ ಅಂದಾಜೇನೋ ತಯಾರಾಗಿದೆ. ಆದರೆ return ಮಾತ್ರ 2·5% ಬರುತ್ತದೆ.

ಶ್ರೀ ಬಿ. ರಾಚಯ್ಯ.—ಇದರಲ್ಲಿ ಇತ್ತೀಚೆಗೆ 10 ಪರ್ಸೆಂಟ್ ರಿಟರ್ನ್ ಬರುವಹಾಗಿರುವುದಕ್ಕೆ ಅಂದಾಜು ತಯಾರುಮಾಡಿ ಕಳುಹಿಸಿದ್ದಾರೆಯೇ ?

ಡಾ॥ ಆರ್. ನಾಗನಗೌಡ.— ಅಂಥಾದ್ದು ಯಾವುದೂ ಬಂದಿಲ್ಲ. ಈಗ ಇರುವುದು 2 ಪರ್ಸೆಂಟ್ 5 ಪರ್ಸೆಂಟು ಮಾತ್ರ ಆಗಿದೆ.

ಶ್ರೀ ಬಿ. ರಾಚಯ್ಯ.—ಕಳೆದ ಎರಡು ವರ್ಷಗಳಲ್ಲಿ ಚಾಮರಾಜನಗರ ತಾಲ್ಲೂಕಿನಲ್ಲಿ ಒಂದು ಗ್ರಾಮಕ್ಕೆ ಮಾತ್ರ ವಿದ್ಯುಚ್ಛಕ್ತಿ ಕೊಟ್ಟಿದೆ ಎಂದು ಹೇಳಿದ್ದೀರಿ. ಮಿಕ್ಕ ಗ್ರಾಮಗಳಿಗೆ ಏಕೆ ಕೊಡಲಿಲ್ಲ ?

ಡಾ॥ ಆರ್. ನಾಗನಗೌಡ.— ಹೌದು, ಕಳೆದ ಎರಡು ವರ್ಷಗಳಿಂದ ಕೊಟ್ಟಿರುವುದು ಅಷ್ಟೆ.

ಶ್ರೀ ಬಿ. ರಾಚಯ್ಯ.—ಆದ್ದರಿಂದ ಮಿಕ್ಕ ಗ್ರಾಮಗಳಿಗೂ ಕೂಡ ವಿದ್ಯುಚ್ಛಕ್ತಿ ಕೊಡುವುದಕ್ಕೆ ಬೇಗ ಪರ್ಯಾಲೋಚನೆ ಮಾಡಿ ಮಂಜೂರು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.— ತಾವು ಹೇಳತಕ್ಕ ಗ್ರಾಮಗಳಲ್ಲಿ ರಿಟರ್ನ್ 10 ಪರ್ಸೆಂಟ್ ಇದ್ದರೆ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇರಿಗೇರ್ಷ ಪಂಪುಗಳನ್ನು ಕೇವಲ ಕಡಮೆಯಾಗಿ ಕೊಟ್ಟಿರುವ ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳು ಎಂತಲೂ ವಿಪರೀತವಾಗಿ ಕೊಟ್ಟಿರುವ ಜಿಲ್ಲೆಗಳು ಮುಂದುವರಿದ ಜಿಲ್ಲೆಗಳು ಎಂತಲೂ ಪರಿಗಣಿಸಿ ಮುಂದುವರಿದ ಜಿಲ್ಲೆಗಳಿಗೆ ಕೊಡುವುದನ್ನು ಸ್ವಲ್ಪ ನಿಲ್ಲಿಸಿ ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚಾಗಿ ಕೊಡುವ ಕ್ರಮವನ್ನು ಕೆಲವು ಕಾಲ ಅನುಸರಿಸುತ್ತೀರಾ ?

Dr. R. NAGAN GOWDA.— I think it is the other way. Wherever there are more pump sets, I think it is an indication of the scarcity of water and the need also is strongly felt. I think we should congratulate them on the efforts they are making to come up to your level.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಲೆನಾಡಿನಲ್ಲಿ 4-5 ತಿಂಗಳು ಮಳೆಯಾಗುತ್ತದೆ. ಬೇಸಗೆ ಕಾಲದಲ್ಲಿ ಸಬ್‌ಸಾಯಲ್ ವಾಟರ್ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ನೀರಿನ ಅಭಾವ ವಿಪರೀತವಾಗಿರುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಅದು ನಿಜ. ತಾವು ಹೇಳತಕ್ಕ ಸಮಸ್ಯೆಯನ್ನು ಪರಿಹರಿಸಬೇಕಾದರೆ ಅಲ್ಲೂ ಕೂಡ ಕೆಲವು ಪಂಪ್ ಸೆಟ್‌ಗಳನ್ನು ಕೊಟ್ಟರೆ ಚೆನ್ನಾಗಿರುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಬಿ. ವಿ. ನಾರಾಯಣರೆಡ್ಡಿ.— ಬಾಗೇಪಲ್ಲ, ಗುಡಿಬಂಡೆ ತಾಲ್ಲೂಕಿನ ವಿಷಯ ಇದರಲ್ಲಿ ಬಂದಿಲ್ಲ ಏಕೆ ಸ್ವಾಮಿ ?

ಡಾ॥ ಆರ್. ನಾಗನಗೌಡ.—ಲಸ್ಟ್ (ಎ) ಒಳಗೆ ಬಾಗೇಪಲ್ಲ ತಾಲ್ಲೂಕು ಬಾಗೇಪಲ್ಲ ಅಂತಲೇ ಇದೆಯಲ್ಲ !

ಶ್ರೀ ಬಿ. ವಿ. ನಾರಾಯಣರೆಡ್ಡಿ.—ನಿಮ್ಮ ಲಸ್ಟ್‌ನಲ್ಲಿ ಇರಬಹುದು, ಪ್ರಿಂಟೆಡ್ ಲಸ್ಟ್‌ನಲ್ಲಿ ಇಲ್ಲ. ಹೋಗಲಿ, ಎಷ್ಟು ಪಂಪ್‌ಸೆಟ್ಟು ಮಂಜೂರು ಮಾಡಿದ್ದೀರಿ, ಸ್ವಾಮಿ ?

ಡಾ॥ ಆರ್. ನಾಗನಗೌಡ.—ಬಾಗೇಪಲ್ಲ ತಾಲ್ಲೂಕಿನ ಸಂಖ್ಯೆ ನನ್ನ ಹತ್ತಿರ ಇಲ್ಲ.

ಶ್ರೀ ಬಿ. ವಿ ನಾರಾಯಣರೆಡ್ಡಿ.—ಅಲ್ಲಿಂದ ಈಗ ಎಷ್ಟು ಅರ್ಜಿಗಳು ಬಂದಿವೆ ?

ಡಾ॥ ಆರ್. ನಾಗೆನಗೌಡ.—Number of applications ಎಷ್ಟು ಎಂಬುದನ್ನು ವಿಚಾರಿಸಿ ಹೇಳುತ್ತೇನೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಬಳ್ಳಾರಿಯವರಿಗೆ ಮಾತ್ರ ವಿದ್ಯುಚ್ಛಕ್ತಿ ಕೊಡುತ್ತಾರೆ ಬಾಕಿಯವರಿಗೆ ಕೊಡುವುದಿಲ್ಲ ಎಂಬ ಸುದ್ದಿ ಇದೆ. ಅದು ನಿಜವೇ ?

Mr. DEPUTY SPEAKER.—That is not a question you can expect the Hon'ble Minister to answer on the basis of rumours. I do not allow that question.

ಶ್ರೀ ಆರ್. ಅನಂತರಾಮ್.—ಗುಬ್ಬಿ ತಾಲ್ಲೂಕಿಗೆ ಎಷ್ಟು ಪಂಪ್‌ಸೆಟ್ಟು ಕೊಟ್ಟಿದ್ದೀರಿ ?

ಡಾ॥ ಆರ್. ನಾಗನಗೌಡ.—ಲಿಸ್ಟ್ (ಎ) ಯಲ್ಲಿ ಕೊಟ್ಟಿದೆ. ಗುಬ್ಬಿ ತಾಲ್ಲೂಕಿನಲ್ಲಿ ಕೆಲವರು ತೆಗೆದು ಕೊಂಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.— ಈ ವಿದ್ಯುಚ್ಛಕ್ತಿಯನ್ನು ತಾವು ಹಳ್ಳಿಗಳಿಗೆ ಒದಗಿಸುವಾಗ ಯಾವ ಆಧಾರದಿಂದ ಒದಗಿಸುತ್ತೀರಿ. ಯಾವುದಾದರೂ ಒಂದು adopted policy ಇದೆಯೋ ಅಥವಾ ಯಾರಾರಿಂದ ಅರ್ಜಿಗಳು ಬರುತ್ತವೆಯೋ ಅವರಿಗೆ ಒದಗಿಸುತ್ತೀವೆ ಎಂತಲೇ ? I want to know that information from the Government, Sir.

ಡಾ॥ ಆರ್. ನಾಗನಗೌಡ.— ಅದು ಒಂದು broad lines ಮೇಲೆ ಪಾಲಿಸಿ ಹಾಕಿಕೊಂಡಿದ್ದೇವೆ. ಈಗ ಡಿಸ್ಟ್ರೆಸ್ ಏರಿಯಾದಲ್ಲಿ ಎಷ್ಟೋ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಹೇಳಿ 4 ಡಿಸ್ಟ್ರಿಕ್ಟ್‌ಗಳಿಗೆ ಹಂಚಿದ್ದೇವೆ. ಆ ತರುವಾಯ ಮಿಕ್ಕ ಡಿಸ್ಟ್ರಿಕ್ಟ್‌ಗಳಿಗೆ ಮೈಸೂರು ಸರ್ಕಾರದವರು ಬಂದಷ್ಟು ಮಂಜೂರು ಮಾಡಿ ಖರ್ಚುಮಾಡುತ್ತಾ ಇದ್ದಾರೆ. ಇದರೊಳಗೆ ಮುಖ್ಯವಾದ ಅಂಶ ಎಂದರೆ ಅಪ್ಲಿಕೇಷ್ನ್ ಬರಬೇಕು, ಆ ತರುವಾಯ ಡಿಪಾಸಿಟ್ ಕಟ್ಟಬೇಕು. ಆಮೇಲೆ ಅದನ್ನು ಇನ್‌ವೆಸ್ಟಿಗೇಟ್ ಮಾಡುತ್ತೇವೆ.

Sri D. DEVARAJ URS.—Shall I take it, Sir, that preference is given only to distress areas ?

Dr. R. NAGAN GOWDA.—No, these two or three years because these areas were in distress condition and because the Government of India also gave a loan specifically mentioning distress areas, we are spending the money that is earmarked for distress areas. But for the rest of the State also, the Government is sanctioning amounts for the purpose.

Sri D. DEVARAJ URS.—While spending these moneys on electricity, have you prepared a list of preferences so far as villages are concerned or do you expect the villagers to come forward with applications ?

Dr. R. NAGAN GOWDA.—The way it works is wherever there is a great need for water-supply for irrigating fields people come forward with large number of applications. Nowadays, everybody is aware of the need for electricity and there are a number of applications. If the Hon'ble Member will tell us what policy he has in mind, I will consider.

Sri D. DEVARAJ URS.—Sir, will the Government be pleased to make a survey of all the villages where electricity can be utilised for purposes of irrigation ?

Dr. R. NAGAN GOWDA.—I do not know, Sir, if it would be worth while for we have now a pretty good idea of the areas in the State where wells would be very useful ; but people there also must show some enthusiasm and come forward with applications and deposits. It is very difficult for the Government with limited finances to think of covering the entire area in a very short time. But in all places where there is a great demand, it will be covered.

Sri D. DEVARAJ URS.—Will that not obviate so many formalities and representations from the Members of that Taluk and the leading persons of the Taluk coming to the Government and worrying them, if they should conduct a survey of the needs of each area and have a five-year or three-year programme of covering all areas ? Will that not obviate all these difficulties and from that point of view, will it not be better for Government to make a survey ?

Dr. R. NAGAN GOWDA.—I do not know if a survey would be very useful. But in any case, we will examine the suggestion that the Hon'ble Member has given.

ಶ್ರೀ ವಿ. ವೆಂಕಟಪ್ಪ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಮೂರು ಹೆಸರುಗಳನ್ನು ಕೊಟ್ಟಿದ್ದೀರಿ. ಆ ಮೂರು ಗ್ರಾಮಗಳಿಗೆ ಏಕೆ ಇನ್ನೂ ಮಂಜೂರಾಗಿಲ್ಲ ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆ.

ಶ್ರೀ ವಿ. ವೆಂಕಟಪ್ಪ.—ಆ ತಾಲ್ಲೂಕಿನಲ್ಲಿ ಸಂತೇ ಮೊಗೇನಹಳ್ಳಿ ಗ್ರಾಮಕ್ಕೆ ಅಂದಾಜು ತಯಾರಾಗಿದೆಯೇ ?

Dr. R. NAGAN GOWDA.—I have not got that information for Santhemogenahally. ಹೊಂಗನೂರನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನೆರಡು ಇರುವುದು ಅಬ್ಬೂರು ಮತ್ತು ಕಾಳಹೊಸೂರು, ಅವಕ್ಕೆ ರಿಜರ್ವ್ ಬಹಳ ಕಡಮೆ ಬರುತ್ತದೆ. ಹೊಂಗನೂರಿನಲ್ಲಿ ರಿಜರ್ವ್ ಚೆನ್ನಾಗಿದೆ. ಅದನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಸಂತೇಮೊಗೇನಹಳ್ಳಿಗೆ ಹಿಂದೆ ಶ್ರೀ ಕೆ. ಟಿ. ಭಾಷ್ಯಂರವರು ಈ ಇರಾಖಾ

ಮಂತ್ರಿಗಳಾಗಿದ್ದಾಗ, ಸಾಂಕ್ಷ್ಯ ಆಗಿದೆಯೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

ಶ್ರೀ ಟಿ. ನಾಗಪ್ಪ.—ಉದ್ದೇರು, ಶಾಂತವೇರಿ, ಕಾಮನದುರ್ಗ ಮತ್ತು ಸಿದ್ದವಬಿಲೆ ಗ್ರಾಮಗಳ ಕೆಲಸ ಕಂಪ್ಲೀಟಾಗಿದೆಯೆ ?

ಡಾ॥ ಆರ್. ನಾಗನಗೌಡ.—ಇಲ್ಲ. ಅದು ಇನ್ನೂ ಎಸ್ಟಿಮೇಟ್ ಸ್ಟೇಜಿನಲ್ಲೇ ಇದೆ.

ಶ್ರೀ ಟಿ. ನಾಗಪ್ಪ.—ಅದು ಮಂಜೂರಾಗಿ ಬಹಳ ದಿವಸವಾಯಿತು, ವಿಚಾರಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆ. (*c*) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಅದಕ್ಕೆ ಅಂದಾಜು ಮಂಜೂರಾಗಿಲ್ಲವೆಂದು ಹೇಳಿದೆ. ಅದಕ್ಕೆ ರಿಟರ್ನ್ ಬಹಳ ಕಡಮೆಯಿರಬೇಕು.

ಶ್ರೀ ಟಿ. ನಾಗಪ್ಪ.—ಇದನ್ನು ಜಾಗ್ರತೆ ಮಾಡುವಿರಾ ?

ಡಾ॥ ಆರ್. ನಾಗನಗೌಡ.—ಪರಿಶೀಲಿಸಲಾಗುವುದು.

Posts higher than Veterinary Inspectors in Animal Husbandry Department.

Q.—113. Sri H. S. RUDRAPPA (Honnali).—

Will the Government be pleased to state :—

(*a*) how many gazetted and non-gazetted posts, higher than the cadre of Veterinary Inspectors, are there in the Animal Husbandry Department ;

(*b*) how many of them were vacant in the month of November 1953 ;

(*c*) the steps taken to fill up the vacancies ;

(*d*) how many officers of this Department were holding tenure appointments under the Animal Husbandry Department and other departments in gazetted cadre on 1-10-53 and what are their services in the gazetted cadre ?

A.—Dr. R. NAGAN GOWDA (Minister for Agriculture).—

(*a*) Gazetted : 27. Non-gazetted: 2.

(*b*) Three.

(*c*) Proposals for filling up the vacant posts are under consideration.

(*d*) Four :

(i) Five years, three months and one day.

(ii) Two years and 11 months.

(iii) Do

(iv) One year and two months.

Sri H. S. RUDRAPPA.—I have no supplementaries.

ಶ್ರೀ ಎಸ್. ಎಂ. ಮರಿಯಪ್ಪ.—1950 ರಿಂದೀಚೆಗೆ ಈ ಇಲಾಖೆಯಲ್ಲಿ ಹೆಚ್ಚು ಪರಿಶ್ರಮ ಹೊಂದಲು ಯಾರನ್ನಾದರೂ ಹೊರದೇಶಕ್ಕೆ ಕಳುಹಿಸಿದ್ದಿರಾ ?

ಡಾ॥ ಆರ್. ನಾಗನಗೌಡ.—ಹೋಗಿ ಬಂದವರು ಕೆಲವರಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಆ ಅಧಿಕಾರಿಗಳು ಈಗ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆಯೆ ?

ಡಾ॥ ಆರ್. ನಾಗನಗೌಡ.—ಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಹೊರದೇಶಕ್ಕೆ ಹೋಗಿ ಬಂದವರಲ್ಲಿ ಎಷ್ಟು ಜನ ಹಾಗೆ ಕೆಲಸ ಮಾಡುತ್ತಿಲ್ಲ ?

ಡಾ॥ ಆರ್. ನಾಗನಗೌಡ.—ಆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಇಲ್ಲದಿರುವವರು ಯೂನಿವರ್ಸಿಟಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಅವರನ್ನು ಹೊರದೇಶಕ್ಕೆ ಕಳುಹಿಸಿದ್ದ ಉದ್ದೇಶ ಸಾರ್ಥಕವಾಗುವುದಕ್ಕೆ ಪುನಃ ಅವರನ್ನು ಆ ಇಲಾಖೆಯಲ್ಲಿ ಕೆಲಸ ಮಾಡುವಂತೆ ಹೇಳಬೇಕಾದದ್ದು ಸೂಕ್ತವಲ್ಲವೆ ?

ಡಾ॥ ಆರ್. ನಾಗನಗೌಡ.—ಹೆಸರುಗಳನ್ನು ಹೇಳಿದರೆ ನಾನು ವಿಚಾರಿಸುತ್ತೇನೆ. There is nothing private or secret about it.

ಶ್ರೀ ಎಸ್. ಗೋಪಾಲಗೌಡ.—ಈಗ 27 ಗೆಜೆಟೆಡ್ ಹುದ್ದೆಗಳಿವೆಯೆಂದು ಉತ್ತರ ಕೊಟ್ಟಿದೆ. ಆ ಹುದ್ದೆಗಳು ಸಂಸ್ಥಾನದಲ್ಲಿರುವ ಪಶುಗಳ ಸಂಖ್ಯೆಗನುಸಾರವಾಗಿವೆಯೇ ?

ಡಾ॥ ಆರ್. ನಾಗನಗೌಡ.—ನಮಗೆ ಬೇಕಾದಷ್ಟು ಇನ್‌ಸ್ಪೆಕ್ಟರುಗಳಿದ್ದಾರೆ. They are in close contact with the working and they are doing their work.

ಶ್ರೀ ಎಸ್. ಗೋಪಾಲಗೌಡ.—ಪಶುಪಾಲನೆಗೆ ಈ ಗೆಜೆಟೆಡ್ ಹುದ್ದೆಗಳ ಅವಶ್ಯಕತೆಯಿದೆಯೆ ?

ಡಾ॥ ಆರ್. ನಾಗನಗೌಡ.—ಇದೆ.

ಶ್ರೀ ಎಸ್. ಗೋಪಾಲಗೌಡ.—ಅವರು ಸಾಮಾನ್ಯವಾಗಿ ಯಾವರೀತಿ ಕೆಲಸವನ್ನು ನಡೆಸುತ್ತಾರೆ ?

Mr. DEPUTY SPEAKER.—In accordance with the rules of Government.

ಶ್ರೀ ಬಿ. ರಾಚಯ್ಯ.—ಈ ಇಲಾಖೆಯಿಂದ ಹೊರದೇಶಕ್ಕೆ ಎಷ್ಟು ಮಂದಿಯನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದೆ ?

ಡಾ॥ ಆರ್. ನಾಗನಗೌಡ.—ಎಂಟು ಹತ್ತು ಮಂದಿ ಹೋಗಿ ಬಂದಿರಬಹುದು, ಜ್ಞಾಪಕವಿಲ್ಲ.

ಶ್ರೀ ಬಿ. ರಾಚಯ್ಯ.—ಅದರಲ್ಲಿ ಯೂನಿವರ್ಸಿಟಿಯಲ್ಲಿ ಎಷ್ಟು ಜನರಿದ್ದಾರೆ ?

ಡಾ॥ ಆರ್. ನಾಗನಗೌಡ.—ಇಬ್ಬರು. ಒಬ್ಬರ ಹೆಸರು ನಾರಾಯಣರಾವ್, ಇನ್ನೊಬ್ಬರ ಹೆಸರು ಜ್ಞಾಪಕವಿಲ್ಲ.